ಇಟ್ಟಿದ್ದಾರೆ, ಪ್ರೈವೇಟ್ ಪಾರ್ಟಿಯ ಹಣ ಎಷ್ಟು, ಪಾಲಿಟೀಷಿಯನ್ಸ್ ಹಣ ಎಷ್ಟು ಈ ಎಲ್ಲಾ ವಿವರಗಳೂ ಅದರಲ್ಲಿ ಬರಲಿ. ನಂತರ ನಾವು ಮುಂದಿನ ಚರ್ಚೆ ಮಾಡುತ್ತೇವೆ.

ಶ್ರೀ ಸಿ.ಹೆಚ್. ವಿಜಯಶಂಕರ್ : ಮೊದಲು ಮಂತ್ರಿಗಳು ಇದನ್ನು ಕಲ್ಯಾಣಿ ಗ್ರೂಪ್ಸ್ ಆಫ್ ಇಂಡಸ್ಟ್ರೀಸ್‌ಗೆ ಕೊಟ್ಟಿದ್ದೇವೆ ಎನ್ನುವ ಉತ್ತರವನ್ನು ಕೊಟ್ಟಿದ್ದರು. ಈಗ ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ನವರಿಗೆ ಕೊಟ್ಟಿದ್ದೇವೆ ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ ಇದರಲ್ಲಿ ಯಾವುದು ಸತ್ಯ ? ಇನ್ನು ಮುಂದೆ ಇದು ಇನ್ನಾವುದಾದರೂ ಕಂಪನಿಗೆ ಬದಲಾವಣೆಯಾಗುತ್ತದೆಯೇ ಎಂಬುದನ್ನು ತಿಳಿಸಬೇಕು.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೆ, ಕಲ್ಯಾಣಿ ಗ್ರೂಪ್ಸ್ ಆಫ್ ಇಂಡಸ್ಟ್ರೀಸ್ ಮತ್ತು ನಂದಿ ಇನ್‌ಪ್ರಾಸ್ಟ್ರಕ್ಚರ್ ಕಾರ್ಡರ್ ಇವೆರಡೂ ಸಹ ಒಂದೇ ಸಂಸ್ಥೆಗಳು.

ಅಧ್ಯಕ್ಷರು : ಅವೆರಡೂ ಒಂದೇ ಸಂಸ್ಥೆಗಳು.

ಕುಣಿಗಲ್‌ನಲ್ಲಿ ಕ್ರೀಡಾಂಗಣ ನಿರ್ಮಾಣ

3126 - ಶ್ರೀ ಎಸ್. ಪಿ. ಮುದ್ದುಹನುಮೇಗೌಡ (ಕುಣಿಗಲ್) : ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1. *ಕುಣಿಗಲ್ ಪಟ್ಟಣದಲ್ಲಿ ಕ್ರೀಡಾಂಗಣ ಸ್ಥಾಪಿಸುವಲ್ಲಿ ಇದುವರೆವಿಗೂ ಆದ ಪ್ರಗತಿ ಏನು ?*
2. *ಹಾಗಿದ್ದಲ್ಲಿ ವಿಳಂಬಕ್ಕೆ ಕಾರಣವೇನು ?*
3. *ಸರ್ಕಾರವು ಈ ಯೋಜನೆಯ ಪ್ರಗತಿಗೆ ಹಾಕಿಕೊಂಡಿರುವ ಕಾರ್ಯಕ್ರಮವೇನು ?*

ಶ್ರೀ ಅಜಯಕುಮಾರ್ ಸರನಾಯಕ್ (ಯುವಜನಾ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು) :

1. ಕುಣಿಗಲ್ ಪಟ್ಟಣದಲ್ಲಿ ಕ್ರೀಡಾಂಗಣ ನಿರ್ಮಾಣಕ್ಕಾಗಿ ಪಶುಸಂಗೋಪನಾ ಇಲಾಖೆಯ 7 ಎಕರೆ ಜಮೀನನ್ನು ಗುರುತಿಸಿ ತುಮಕೂರು ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ವಿಧಾನಸಭಾ ಸದಸ್ಯರೂ ಸೇರಿದಂತೆ ಕ್ರೀಡಾ ಸಮಿತಿಯ ಸಭೆಯಲ್ಲಿ ಸದರಿ ಜಮೀನಿನಲ್ಲಿ ಕ್ರೀಡಾಂಗಣ ನಿರ್ಮಿಸಲು ಸರ್ವಾನುಮತದಿಂದ ತೀರ್ಮಾನಿಸಲಾಗಿರುತ್ತದೆ. ಈ ಸಂಬಂಧ ಉಪ-ವಿಭಾಗಾಧಿಕಾರಿಗಳು, ಜಿಲ್ಲಾಧಿಕಾರಿಗಳು, ತುಮಕೂರು ಇವರಿಗೆ ಪತ್ರ ಬರೆದಿದ್ದು, ಜಿಲ್ಲಾಧಿಕಾರಿ ತುಮಕೂರು ಇವರು ವಿಭಾಗಾಧಿಕಾರಿಗಳು, ಬೆಂಗಳೂರು ಇವರಿಗೆ ನಿವೇಶನವನ್ನು ಹಸ್ತಾಂತರಿಸುವಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

2. ವಿಭಾಗಾಧಿಕಾರಿಗಳು, ಬೆಂಗಳೂರು ಇವರಿಗೆ ಮಂಜೂರಾತಿಗಾಗಿ ಸಲ್ಲಿಸಿರುವುದರಿಂದ ಮಂಜೂರಾಗಿ ಬಂದ ತಕ್ಷಣ, ಜಿಲ್ಲಾ ಪಂಚಾಯತ್ ವತಿಯಿಂದ ನಿರ್ಮಾಣ ಕಾರ್ಯ ಪ್ರಾರಂಭಿಸ ಲಾಗುವುದು.

3. ಜಮೀನು ಈ ಇಲಾಖೆಗೆ ವರ್ಗವಾದ ಮೇಲೆ ಕ್ರೀಡಾಂಗಣದ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಗುವುದು.

ಶ್ರೀ ಎಸ್. ಪಿ. ಮುದ್ದಹನುಮೇಗೌಡ : ಇದು ಬಹಳ ಹಿನ್ನಾಡಿನ ಜಿಲ್ಲೆಯಾಗಿದೆ. ಕ್ರೀಡಾಂಗಣಕ್ಕಾಗಿ ಸರ್ಕಾರಿ ಜಮೀನನ್ನು ಕೊಡುವುದಕ್ಕೆ ಇಷ್ಟೊಂದು ವರ್ಷಾನುಗಟ್ಟಲೆ ಡಿಲೆ ಮಾಡಿದರೆ ಹೇಗೆ? ದಯಮಾಡಿ ಸಚಿವರು ಇದನ್ನು ಯಾವಾಗ ಕೊಡುತ್ತೀರಿ? ಏಕೆಂದರೆ ಇದು ಗೌರ್ನಮೆಂಟ್ ಲ್ಯಾಂಡ್. ಪ್ರೈವೇಟ್ ಲ್ಯಾಂಡ್ ಅಕ್ವೈರ್ ಮಾಡಿಕೊಂಡು ಕೊಡಬೇಕಾದರೆ ವಿಳಂಬವಾಗುತ್ತದೆ. ದಯಮಾಡಿ ಸರ್ಕಾರ ಯಾವಾಗ ಪ್ರಯತ್ನ ಮಾಡುತ್ತದೆ. ದಯಮಾಡಿ ಇದರ ಬಗ್ಗೆ ಕಾಳಜಿವಹಿಸಿ ಆದಷ್ಟು ಬೇಗನೆ ಪ್ರಾರಂಭ ಮಾಡಿಸಬೇಕು.

MR. SPEAKER : The Hon'ble Minister will use his good Office.

ಶ್ರೀ ಅಜಯಕುಮಾರ್ ಸರ್‌ನಾಯಕ್ : ಈ ಜಮೀನು ಏನಿದೆ ಇದನ್ನು ಸ್ಟೇಡಿಯಂ ಕಟ್ಟುವ ಸಲುವಾಗಿ ಗುರುತಿಸಲಾಗಿದೆ. ಈ ಲ್ಯಾಂಡ್‌ನ್ನು ಪ್ರೈವೇಟ್ ಯುನೈಟೆಡ್ ಸ್ಪಡ್ ಫಾರ್ಮ್‌ಗೆ 1992ರಲ್ಲಿ ಲೀಸ್‌ಗೆ ನೀಡಿದ್ದಾರೆ. ಒಟ್ಟು ಜಮೀನು 137 ಎಕರೆ ಇದ್ದು ಇದರ ಪೈಕಿ 7 ಎಕರೆಯನ್ನು ಕ್ರೀಡಾಂಗಣ ಕಟ್ಟುವುದಕ್ಕೆ ತೆಗೆದುಕೊಳ್ಳಬೇಕೆಂದು ಈಗಾಗಲೇ ನಾವು ಡಿವಿಜನಲ್ ಕಮಿಷನರ್‌ಗೆ ಬರೆದಿದ್ದೇವೆ. ಈಗ ಯಾರು ಲೀಸ್‌ಗಾಗಿ ಕೊಟ್ಟಿದ್ದಾರೆ ಆ ವ್ಯಕ್ತಿಯ ಮುಖಾಂತರ 7 ಎಕರೆ ಜಮೀನನ್ನು ವಿತ್‌ಡ್ರಾ ಮಾಡಿಕೊಡಬೇಕೆಂದು ಡಿವಿಜನಲ್ ಕಮಿಷನರ್‌ರವರೊಂದಿಗೆ ಮಾತನಾಡಿದ್ದೇವೆ. ಸಾಧ್ಯವಾದಷ್ಟು ಬೇಗನೆ ಸ್ಟೇಡಿಯಂ ಕಟ್ಟುವುದಕ್ಕೆ ಈಗಾಗಲೇ ನಾವು ಡಿವಿಜನಲ್ ಕಮಿಷನರ್ ಜೊತೆಯಲ್ಲಿ ಮಾತನಾಡಿದ್ದೇವೆ.

ಹೊನ್ನಾವರ ತಾಲ್ಲೂಕಿನ ಮೋಳ್ಕೋಡ ಸೇತುವೆ ನಿರ್ಮಾಣ

382 - ಶ್ರೀ ಶಿವಾನಂದ ನಾಯ್ಕ (ಭಟ್ಕಳ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊನ್ನಾವರ ತಾಲ್ಲೂಕಿನ ಮೋಳ್ಕೋಡ ದ್ವೀಪಕ್ಕೆ ರಸ್ತೆ ಸಂಪರ್ಕ ಕಲ್ಪಿಸಲು ಸೇತುವೆ ನಿರ್ಮಿಸಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಯಾವಾಗ ನಿರ್ಮಿಸಲಾಗುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) ಈ ಸೇತುವೆ ನಿರ್ಮಾಣ ಸೇರಿ, ಮೋಳ್ಕೊಡ ದ್ವೀಪದಲ್ಲಿರುವ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಕಾರ್ಯವನ್ನು ರಸ್ತೆ ರಹಿತ ಹಳ್ಳಿಗಳಿಗೆ ಸಂಪರ್ಕ ವ್ಯವಸ್ಥೆ ಕಲ್ಪಿಸುವ ಯೋಜನೆಯಡಿ 1997-98ನೇ ಸಾಲಿನಲ್ಲಿ ಕೈಗೆತ್ತಿಕೊಳ್ಳಲು ಯೋಜಿಸಿದೆ.

ಶ್ರೀ ಶಿವಾನಂದ ನಾಯ್ಕ : ಮಾನ್ಯ ಅಧ್ಯಕ್ಷರೆ, ಹೊನ್ನಾವರ ತಾಲ್ಲೂಕಿನ ಶರಾವತಿ ನದಿಯ ಮಧ್ಯದಲ್ಲಿರುವ ಒಂದು ನಡುಗಡ್ಡೆಯ ಗ್ರಾಮ ಮೋಳ್ಕೊಡ. ಈಗಾಗಲೇ ಮಾನ್ಯ ಸಚಿವರು ಅಲ್ಲಿಯ